ಕಥೆ



ರವಿ ಮಡೋಡಿ

ಕಲೆ: ಸಂತೋಷ್ ಸಸಿಹಿತ್ಲು

# ಇಳಿದ ಹೊರೆ ಭಾರವಾಗಿ



‘ಹಾಳಾದ್ದು. ಇವತ್ತೂ ಬಂದಾವೆ ಇರ್ಬಕು’ ಎಂದು ಬೊಮ್ಮ ನಿಧಾನವಾಗಿ ತಲೆಗೆ ಹಾಕಿಕೊಂಡಿದ್ದ ಹಾಳೆಯ ಟೊಪ್ಪಿಯನ್ನು ತೆಗೆದು ಗಿಳಿಗೂಟಕ್ಕೆ ಸಿಕ್ಕಿಸಿ, ಸೊಂಟಕ್ಕೆ ಕಟ್ಟಿದ್ದ ಕಡಗತ್ತಿಯನ್ನು ಹೊರ ತೆಗೆದು ಹಂಚಿನ ಮಾಡಿಗೆ ತೂರಿಸಿ, ಹಣೆಯಲ್ಲಿ ಬರುತ್ತಿದ್ದ ಬೆವರನ್ನು ಬಗಲಿನ ಟವೆಲ್ಲಿನಿಂದ ಒರೆಸಿಕೊಳ್ಳುತ್ತ ಮನೆಯೊಳಕ್ಕೆ ಬರುತ್ತ ಕೊಸರುತ್ತಿದ್ದ. ಆತನ ಮಾತುಗಳು ಅಡುಗೆಯ ಮನೆಯಲ್ಲಿ ಮಘೆ ಸೌತೆ ಕಾಯಿ ಹಾಕಿ ದೋಸೆ ಹಿಟ್ಟನ್ನು ಅರೆಯುತ್ತಿದ್ದ ಹೆಂಡತಿ ಕಲ್ಲಮ್ಮನಿಗೆ ಕೇಳಿಸದೆ ಉಳಿದಿರಲಿಲ್ಲ. ಆದರೂ ತನ್ನ ಪಾಡಿಗೆ ಪದವನ್ನು ಗುನುಗುತ್ತ ಅರೆಯುತ್ತಿದ್ದಳು. ಅರೆಯುವ ರಭಸಕ್ಕೆ ಬುಳ್ ಬುಳ್ ಎನ್ನುವ ಶಬ್ದವನ್ನು ಬರುತ್ತಿರುವಾಗಲೇ ಹೊರಗಿನಿಂದ, ‘ಏಯ್ ಕುಡಿಯಕ್ ನೀರ್ ತಗಾ ಬಾರೆ’ ಎಂದು ಗಂಡ ಬೊಮ್ಮನಾಯ್ಕ ಕೂಗಿದ್ದ. ಕಲ್ಲಮ್ಮ ಒರಳಿನ ಪಕ್ಕದಲ್ಲಿ ಇಟ್ಟಿದ್ದ ನೀರಿನ ಪಾತ್ರೆಗೆ ತನ್ನ ಕೈಯನ್ನು ಅದ್ದಿ, ಅಂಟಿದ್ದ ಹಿಟ್ಟನ್ನು ತೊಳೆದುಕೊಳ್ಳುತ್ತ ಮೇಲೆದ್ದು, ಒದ್ದೆಯಾದ ತನ್ನ ಕೈಯನ್ನು ಅಡಿ ಲಂಗಕ್ಕೆ ಒರಸಿಕೊಳ್ಳುತ್ತ, ಡ್ರಮ್ಮಿನಿಂದ ಒಂದು ಮಿಳ್ಳೆಯ ನೀರನ್ನು ಜಗುಲಿಗೆ ತಂದಾಗ, ಆಯಾಸದಿಂದ ಬೊಮ್ಮನಾಯ್ಕ ಬೆತ್ತದ ಕುರ್ಚಿಯಲ್ಲಿ ಕುಳಿತಿದ್ದ. ಅವನ ಎದುರಿನಲ್ಲಿ ಅವನ ಆಪ್ತ ನಾಯಿಗಳಾದ ಬೈರಾ, ಟಾಮಿಯೂ ಕೂಡ ಬಾಯನ್ನು ತೆರೆದು ವಿರಮಿಸುತ್ತಿದ್ದವು.